ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ,
ಮಡಿಕೇರಿ.

**ಸಿ.ಸಿ.ನಂಃ1546/25**

ಪಿಡಬ್ಲ್ಯುಃ – 3

ಸಿಡಬ್ಲ್ಯುಃ – 3

ದಿನಾಂಕಃ 02.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | – ಸುಗು |
| ತಂದೆಯ ಹೆಸರು | – ಲೇಟ್ ಗಣಪತಿ |
| ವಯಸ್ಸು | – 54 ವರ್ಷ |
| ವೃತ್ತಿ | – ವ್ಯವಸಾಯ |
| ವಾಸಸ್ಥಳ | – ಕುಂಬಳದಾಳು ಗ್ರಾಮ |

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ–

ಚಾಸಾ–1, 2, 4 ನನಗೆ ಗೊತ್ತು. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ಸ್ಥಳ ಮಹಜರಾಗಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಅದನ್ನು ಈಗಾಗಲೇ ನಿಪಿ–2 ಎಂದು ಗುರುತಿಸಲಾಗಿದೆ. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯ ಸಹಿಯನ್ನು ನಿಪಿ–2(ಬಿ) ಎಂದು ಗುರುತಿಸಲಾಯಿತು. ದಿಃ 10.04.2025 ರಂದು ಚಾಸಾ–1 ರವರ ತೋಟಕ್ಕೆ ಹೋಗುವ ದಾರಿಯಲ್ಲಿ ಆರೊಪಿತರು ಅಕ್ರಮವಾಗಿ ಶೆಡ್ಡುಗಳನ್ನು ಹಾಕಿದ್ದರು, ಈ ಬಾಪ್ತು ಪೊಲೀಸರು ನಿಪಿ–2 ರಂತೆ ಮಹಜರು ಮಾಡಿದ್ದು, ಆಗ ನಾನು ನಿಪಿ–2 ಕ್ಕೆ ಸಹಿ ಮಾಡಿದ್ದೇನೆ. ಆಗ ಚಾಸಾ–4 ಕೂಡ ಇದ್ದರು. ಚಾಸಾ–4 ಕೂಡ ನಿಪಿ–2 ಮಹಜರಿಗೆ ಸಹಿ ಮಾಡಿದ್ದಾರೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿದ್ದು, ಅದು ಕಚ್ಚಾ ನಕಾಶೆಯಾಗಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದಾರೆ. ಅದನ್ನು ಈಗಾಗಲೇ ನಿಪಿ–3 ಎಂದು ಗುರುತಿಸಲಾಗಿದೆ. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ, ಸಾಕ್ಷಿಯ ಸಹಿಯನ್ನು ನಿಪಿ–3(ಬಿ) ಎಂದು ಗುರುತಿಸಲಾಯಿತು. ಮಹಜರು ಕಾಲದಲ್ಲಿ ಪೊಲೀಸರು ನಿಪಿ–3 ರಂತೆ ಸ್ಥಳದ ಕಚ್ಚಾ ನಕಾಶೆ ಬರೆದಿರುತ್ತಾರೆ, ಆಗ ನಾನು ಅದಕ್ಕೆ ಸಹಿ ಮಾಡಿರುತ್ತೇನೆ. ನಿಪಿ–3 ಕ್ಕೆ

ಚಾಸಾ-4 ಕೂಡ ಸಹಿ ಮಾಡಿರುತ್ತಾರೆ. ಆರೋಪಿತರು ಚಾಸಾ-1 ರವರು ತೋಟಕ್ಕೆ ಹೋಗುವ ರಸ್ತೆಯಲ್ಲಿ ಅಕ್ರಮವಾಗಿ ಶೆಡ್ಡುಗಳನ್ನು ಹಾಕಿದ್ದಾರೆ. ಪೊಲೀಸರು ಮಹಜರು ಕಾಲಕ್ಕೆ ಫೊಟೋ ಕೂಡ ತೆಗೆದಿರುತ್ತಾರೆ. ಆ ಫೊಟೋವನ್ನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದೆ. ನಿಪಿ-2 ಮಹಜರನ್ನು ಸಂಜೆ 4-45 ರಿಂದ 5-45 ರವರೆಗೆ ಮಾಡಿರುತ್ತಾರೆ. ಘಟನಾ ಸ್ಥಳವನ್ನು ಚಾಸಾ-1 ರವರು ತೋರಿದ ಮೇರೆಗೆ ಪೊಲೀಸರು ಮಹಜರು ಮಾಡಿರುತ್ತಾರೆ.

ಪಾಟೀ ಸವಾಲುಃ – ಆರೋಪಿ ಪರ ವಕೀಲರಾದ ಶ್ರೀ. ಕೆ ಕೆ ಆರ್ ರವರಿಂದಃ-

ನಾನು ಮೂರ್ನಾಡಿನಿಂದ ಕುಂಬಳದಾಳುವಿನಲ್ಲಿರುವ ನನ್ನ ಮನೆಗೆ ಹೋಗುತ್ತಿದ್ದಾಗ ಪೊಲೀಸರು ನನ್ನನ್ನು ಕರೆದು ಮಹಜರಿಗೆ ಪಂಚರಾಗಬೇಕೆಂದು ತಿಳಿಸಿದರು. ಪೊಲೀಸರು ನನಗೆ ಪಂಚರಾಗಬೇಕೆಂದು ಹೇಳಿ ನೋಟಿಸ್ ನೀಡಿಲ್ಲ. ಮಹಜರು ಕಾಲಕ್ಕೆ ಚಾಸಾ-1 ರವರು ಇದ್ದರು. ನಿಪಿ-2 ರಂತೆ ಮಹಜರು ಮಾಡುವಾಗ ಅಲ್ಲಿ ಆರೋಪಿತರು ಮತ್ತು ಚಾಸಾ-1 ರವರ ನಡುವೆ ಗಲಾಟೆ ಆಗುತ್ತಿತ್ತು, ಆಗ ನಾನು ಇದ್ದೆ. ನಾನು ಘಟನಾ ಸ್ಥಳಕ್ಕೆ ಹೋದ ಮೇಲೆ ಪೊಲೀಸರು ಮಹಜರು ಮಾಡಿ ನಿಪಿ-2 ನ್ನು ಬರೆದಿರುತ್ತಾರೆ. ನಿಪಿ-2 ರಲ್ಲಿರುವ ವಿಚಾರವನ್ನು ನಾನು ಓದಿದ್ದೇನೆ. ನನ್ನ ಸಮಕ್ಷಮ ಪೊಲೀಸರು ನಿಪಿ-2 ರಂತೆ ಮಹಜರು ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ-4 ಹಾಗೂ ಚಾಸಾ-1 ರವರು ನನ್ನ ಸಮಕ್ಷಮ ಮಹಜರಿಗೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರಿಗೆಸಹಾಯ ಮಾಡಲು ನಾನು ನಿಪಿ-2 ಮಹಜರಿಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲದಿದ್ದರೂ ಸಹ ಆರೋಪಿತರಿಗೆ ತೊಂದರೆ ಮಾಡಲು ನಾನು ಅವರ ವಿರುದ್ಧ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ – ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/ –

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ. ಎಂ. ಎಫ್. ಸಿ, ಮಡಿಕೇರಿ.